ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156
RANI CHANNAMMA UNIVERSITY
Vidyasangama, National Highway – 04, Bhootaramanahatti, Belagavi - 591156
E-mail:rcubacademic2010@gmail.com
rcuregistrar@gmail.com
ಕುಲಸಚಿವರ ಕಾರ್ಯಾಲಯ
Office of the Registrar
Website: www.rcub.ac.in
Phone No.: 0831-2565234/203

ಕ್ರ,ಸಂ.: ರಾಚವಿ/ಬೆಳಗಾವಿ/ಸಿಡಿಸಿ/2021-22/ 91 ದಿನಾಂಕ: 14-09-2021

## ಸುತ್ತೋಲೆ

**ವಿಷಯ:** 2021-22ನೇ ಸಾಲಿಗೆ ರಾಷ್ಟ್ರೀಯ ಶಿಕ್ಷಣ ನೀತಿ-2020ರನ್ವಯ ಸ್ನಾತಕ ಕೋರ್ಸಗಳ ಪ್ರಥಮ ವರ್ಷಕ್ಕೆ ಪ್ರವೇಶ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು.

**ಉಲ್ಲೇಖ:** 1. ಸರ್ಕಾರದ ಆದೇಶ ಪತ್ರ ಸಂಖ್ಯೆ: ಇಡಿ 34 ಇಜಿಬಿವ್ಹಿ 2020. ದಿನಾಂಕ: 25-08-2021.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 14-09-2021.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಸಂಯೋಜಿತ ಮಹಾವಿದ್ಯಾಲಯಗಳಿಗೆ ತಿಳಿಸುವುದೇನೆಂದರೆ, ಉಲ್ಲೇಖ 1ರ ಮೂಲಕ ಕರ್ನಾಟಕ ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿ-2020 ನ್ನು 2021-22ನೇ ಸಾಲಿನಿಂದ ಜಾರಿಗೊಳಿಸಿ ಆದೇಶಿಸಿರುವುದರಿಂದ ವಿಶ್ವವಿದ್ಯಾಲಯವು ಕೂಡಾ ರಾಷ್ಟ್ರೀಯ ಶಿಕ್ಷಣ ನೀತಿ-2020 ನ್ನು ಅನುಷ್ಠಾನಕ್ಕೆ ತರಲು ಮಾನ್ಯ ಕುಲಪತಿಗಳು ನೀಡಿದ ಅನುಮೋದನೆ ನೀಡಿದಂತೆ, 2021-22ನೇ ಸಾಲಿನಿಂದ ಪ್ರಥಮ ವರ್ಷದಿಂದ ಜಾರಿಗೊಳಿಸಲಾಗುತ್ತಿದೆ.

ಪ್ರಥಮ ವರ್ಷಕ್ಕೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಯಾವ ತೆರನಾಗಿ ವಿಷಯಗಳ ಆಯ್ಕೆ ಮಾಡಿಕೊಳ್ಳುವುದು, ವಿದ್ಯಾರ್ಥಿಗಳ ಪ್ರವೇಶ ಮಿತಿ ನಿಗದಿಗೆ ಸಂಬಂಧಿಸಿದಂತೆ ಸುತ್ತೋಲೆಗೆ ಲಗತ್ತಿಸಿದ ಮಾರ್ಗಸೂಚಿ, ಪ್ರವೇಶ ಮಿತಿ ಹಂಚಿಕೆ ವಿಧಾನದ ಮಾದರಿಯನ್ನು ಪರಿಶೀಲಿಸುವಂತೆ ಹಾಗೂ ಅದರನ್ವಯ ಅಗತ್ಯ ಕ್ರಮ ಕೈಗೊಳ್ಳುವಂತೆ ಈ ಮೂಲಕ ತಮಗೆ ತಿಳಿಸಲಾಗಿದೆ.

ನಿರ್ದೇಶಕರು
ಕಾಲೇಜು ಅಭಿವೃದ್ಧಿ ಮಂಡಳಿ

ಅಡಕ:

1. ಮಾರ್ಗಸೂಚಿಗಳು
2. ಪ್ರವೇಶ ಮಿತಿ ಹಂಚಿಕೆ ವಿಧಾನದ ಮಾದರಿ

ಇವರಿಗೆ,

ಎಲ್ಲ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156
RANI CHANNAMMA UNIVERSITY
Vidyasangama, National Highway – 04, Bhootaramanahatti, Belagavi - 591156
E-mail:rcubacademic2010@gmail.com
rcuregistrar@gmail.com
ಕುಲಸಚಿವರ ಕಾರ್ಯಾಲಯ
Office of the Registrar
Website: www.rcub.ac.in
Phone No.: 0831-2565234/203

ಕ್ರ.ಸಂ.: ರಾಚವಿ/ಬೆಳಗಾವಿ/ಸಿಡಿಸಿ/2021-22/ ದಿನಾಂಕ: 14-09-2021

## ಮಾರ್ಗಸೂಚಿಗಳು

1. ರಾಷ್ಟ್ರೀಯ ಶಿಕ್ಷಣ ನೀತಿ-2020ರನ್ವಯ, ಈ ಮೊದಲಿನಂತೆ ಬಿ.ಎ. ಹಾಗೂ ಬಿ.ಎಸ್ಸಿ. ಪದವಿಗಳಲ್ಲಿ ಕಾಂಬಿನೇಷನ್‌ಗಳು (ವಿಷಯಗಳ ಸಮೂಹಗಳು: ಉದಾ: HEP, HES, HEK, PCM, CBZ, etc) ಇರುವುದಿಲ್ಲ. ಆದರೆ, ಮಹಾವಿದ್ಯಾಲಯಕ್ಕೆ ಮಂಜೂರಾಗಿರುವ ಒಟ್ಟು ಐಚ್ಛಿಕ ವಿಷಯಗಳಲ್ಲಿ ಕೇವಲ ಎರಡು ಐಚ್ಛಿಕ ವಿಷಯಗಳನ್ನು ಮಾತ್ರ ಡಿಸಿಪ್ಲೇನ್ ಕೋರ್ ವಿಷಯಗಳನ್ನಾಗಿ (Discipline Core Subjects (DSCC)) ಒಬ್ಬ ವಿದ್ಯಾರ್ಥಿಯು ಪಡೆದುಕೊಳ್ಳಬಹುದಾಗಿದೆ. ನಂತರ ಈ ಎರಡು ವಿಷಯಗಳನ್ನು ಹೊರತುಪಡಿಸಿ, ಇನ್ನುಳಿದ ವಿಷಯಗಳಲ್ಲಿ ಒಂದನ್ನು ಮುಕ್ತ ಐಚ್ಛಿಕ ವಿಷಯವನ್ನು (Open Eletive Subject (OE)) ಆ ವಿದ್ಯಾರ್ಥಿಯು ಆಯ್ಕೆ ಮಾಡಿಕೊಳ್ಳಬಹುದಾಗಿದೆ.
2. ಬಿ.ಎ. ಹಾಗೂ ಬಿ.ಎಸ್ಸಿ ಕೋರ್ಸ್‌ಗಳನ್ನು ಹೊರತುಪಡಿಸಿ, ಇನ್ನುಳಿದ ಕೋರ್ಸ್‌ಗಳಿಗೆ (ಉದಾ: ಬಿ.ಕಾಂ., ಬಿ.ಬಿ.ಎ., ಬಿ.ಸಿ.ಎ., ಬಿ.ಎಸ್.ಡಬ್ಲ್ಯೂ, ಇತ್ಯಾದಿ ಕೋರ್ಸ್‌ಗಳಿಗೆ) ಕಾಲೇಜು ಅಭಿವೃದ್ಧಿ ಮಂಡಳಿಯಿಂದ ನೀಡಿರುವ ಸಂಯೋಜನಾ ಅಧಿಸೂಚನೆಗಳಂತೆಯೇ ಪ್ರವೇಶ ನೀಡುವುದು.
3. ರಾಷ್ಟ್ರೀಯ ಶಿಕ್ಷಣ ನೀತಿ-2020ರ ಜಾರಿ ಸಂದರ್ಭದಲ್ಲಿ ಹೆಚ್ಚುವರಿಯಾಗಿ ವಿಶ್ವವಿದ್ಯಾಲಯವು ಖಾಯಂ ಆಗಿ ನೀಡುವ ಪ್ರವೇಶಾತಿಯ ಪ್ರತಿ ಸೀಟ್‌ಗೆ ರೂ.1000/-ಗಳಂತೆ ಕಾಲೇಜು ಅಭಿವೃದ್ಧಿ ಮಂಡಳಿಗೆ ಚಲನ್ ಮೂಲಕ ಭರಿಸಿ, ಹಣಕಾಸು ವಿಭಾಗದಿಂದ ರಸೀದಿಯನ್ನು ಪಡೆದು, ಕಾಲೇಜು ಅಭಿವೃದ್ಧಿ ಮಂಡಳಿಗೆ ಸಲ್ಲಿಸುವುದು.
4. 2021-22ನೇ ಸಾಲಿನಲ್ಲಿ ಸ್ನಾತಕ ಕೋರ್ಸ್‌ಗಳ ಪ್ರವೇಶಾತಿಗೆ ಹೆಚ್ಚಿನ ಬೇಡಿಕೆಯಿರುವುದರಿಂದ ಬಿ.ಎ. ಬಿ.ಕಾಂ. ಹಾಗೂ ಬಿ.ಎಸ್ಸಿ. ಕೋರ್ಸ್‌ಗಳ ಪ್ರವೇಶ ಮಿತಿಯನ್ನು ಅಗತ್ಯವಿರುವ ಮಹಾವಿದ್ಯಾಲಯಗಳು 20% ಹೆಚ್ಚುವರಿ ಪಡೆದುಕೊಳ್ಳಬಹುದಾಗಿದೆ. ಇದಕ್ಕಾಗಿ ಮಹಾವಿದ್ಯಾಲಯಗಳು, ಪ್ರತಿ ಎಸ್.ಸಿ./ ಎಸ್.ಟಿ./ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ರೂ.500/- ಹಾಗೂ ಇತರೆ ವರ್ಗದ ಪ್ರತಿ ವಿದ್ಯಾರ್ಥಿಗೆ ರೂ.1,000/-ಗಳನ್ನು ಹಾಗೂ ಸಂಸ್ಕರಣಾ ಶುಲ್ಕ ರೂ.3,500/-ಗಳನ್ನು ವಿಶ್ವವಿದ್ಯಾಲಯದ ವಿದ್ಯಾಮಂಡಳ ವಿಭಾಗಕ್ಕೆ ಭರಿಸುವುದು.
5. ಈ ಮಾರ್ಗಸೂಚಿಸಯು ಈ ವರ್ಷಕ್ಕೆ ಮಾತ್ರ ಅನ್ವಯವಾಗುವುದು.
6. ಪ್ರವೇಶ ಮಿತಿ ನಿಗದಿಗೆ ಸಂಬಂಧಿಸಿದಂತೆ ಯಾವುದೇ ತೆರನಾದ ಸಹಾಯಕ್ಕಾಗಿ ಕಾಲೇಜು ಅಭಿವೃದ್ಧಿ ಮಂಡಳಿಯನ್ನು ಸಂಪರ್ಕಿಸುವುದು.

ನಿರ್ದೇಶಕರು
ಕಾಲೇಜು ಅಭಿವೃದ್ಧಿ ಮಂಡಳಿ

# ಪ್ರವೇಶ ಮಿತಿ ಹಂಚಿಕೆ ವಿಧಾನದ ಮಾದರಿ

## ಎಬಿಸಿ ಮಹಾವಿದ್ಯಾಲಯವೊಂದರ ವಿಷಯವಾರು ಸಮೂಹಗಳ ಪ್ರವೇಶ ಮಿತಿಯು ಈ ಕೆಳಗಿನಂತಿದ್ದಲ್ಲಿ

| ಕೋರ್ಸ ಹಾಗೂ ಪ್ರವೇಶ ಮಿತಿ | ಪ್ರಸ್ತುತ ಮಹಾವಿದ್ಯಾಲಯದಲ್ಲಿ ಇರುವ ವಿಷಯಗಳ ಸಮೂಹಗಳು ಹಾಗೂ ಪ್ರವೇಶಮಿತಿ | ಮಂಜೂರಾಗಿರುವ ಒಟ್ಟು ಪ್ರವೇಶ ಮಿತಿಯನ್ನು ಈಗಾಗಲೇ ಇರುವ ವಿಷಯಗಳ ಸಮೂಹಗಳಲ್ಲಿರುವ ಒಟ್ಟು ವಿಷಯಗಳ ಸಂಖ್ಯೆಯಿಂದ ಭಾಗಿಸುವುದು. ಇಲ್ಲಿ ಕೆಲವು ವಿಷಯಗಳು ಪುನರಾವರ್ತಿತವಾಗಿರಬಹುದು. | ವಿಷಯವೊಂದು ಎಷ್ಟು ವಿಷಯವಾರು ಸಮೂಹಗಳಲ್ಲಿ ಪುನರಾವರ್ತಿತವಾಗಿದೆಯೋ ಅಷ್ಟರಿಂದ ಗುಣಿಸುವುದು. | ಎರಡರಿಂದ ಗುಣಿಸತಕ್ಕದ್ದು | ವಿಷಯಗಳ ಪ್ರವೇಶ ಮಿತಿ (ವಿದ್ಯಾರ್ಥಿಗಳು ಯಾವುದೇ 2 ಬೇರೆ ವಿಷಯಗಳನ್ನು ಆಯ್ಕೆ ಮಾಡಿಕೊಂಡರೂ ಕೂಡಾ ವಿಷಯಕ್ಕೆ ನಿಗದಿಪಡಿಸಿದ ಪ್ರವೇಶ ಮಿತಿಯನ್ನು ಮೀರತಕ್ಕದ್ದಲ್ಲ) | ಬಿ.ಎ. ಕೋರ್ಸನ ವಿಷಯಗಳ ಒಟ್ಟು ಪ್ರವೇಶ ಮಿತಿ |
|---|---|---|---|---|---|---|
| ಬಿ.ಎ. 80 | ಇಂಗ್ಲೀಷ-ಸಮಾಜಶಾಸ್ತ್ರ-ಇತಿಹಾಸ-20 | 5 ವಿಷಯವಾರು ಸಮೂಹಗಳಲ್ಲಿ ಪುನರಾವರ್ತಿತವಾಗಿರುವ ವಿಷಯಗಳು ಸೇರಿದಂತೆ ಒಟ್ಟು 15 ವಿಷಯಗಳು ಇರುತ್ತವೆ. ಆದ್ದರಿಂದ ಒಟ್ಟು ಪ್ರವೇಶ ಮಿತಿಯನ್ನು 15 ರಿಂದ ಭಾಗಿಸುವುದು. **80/15=5.33** | ಇಂಗ್ಲೀಷ ವಿಷಯವು 2 ವಿಷಯವಾರು ಸಮೂಹಗಳಲ್ಲಿ ಪುನರಾವರ್ತಿತವಾಗಿದೆ. ಕಾರಣ, 2X5.33=10.66 | 10.66X2=21.32 | 21 | **160** ಹೀಗೆ ಪ್ರತಿ ವಿದ್ಯಾರ್ಥಿಯು ಎರಡು ವಿಷಯಗಳಿಗೆ ಪ್ರವೇಶ ಪಡೆದಂತಹ ಸಂದರ್ಭದಲ್ಲಿ 160 ವಿದ್ಯಾರ್ಥಿಗಳ ಸಂಖ್ಯೆಯನ್ನು ತೋರಿಸುತ್ತದೆ. ಆದರೆ ವಾಸ್ತವವಾಗಿ ಇಲ್ಲಿ 80 ವಿದ್ಯಾರ್ಥಿಗಳು ಮಾತ್ರ ಪ್ರವೇಶ ಪಡೆದುಕೊಂಡಿರುತ್ತಾರೆ ಎಂಬುದನ್ನು ಗಮನಿಸತಕ್ಕದ್ದು. |
| | ಇಂಗ್ಲೀಷ-ಅರ್ಥಶಾಸ್ತ್ರ-ಇತಿಹಾಸ-15 | | ಸಮಾಜಶಾಸ್ತ್ರ 2X5.33=10.66 | 10.66X2=21.32 | 21 | |
| | ಕನ್ನಡ-ಅರ್ಥಶಾಸ್ತ್ರ-ರಾಜ್ಯಶಾಸ್ತ್ರ-15 | | ಇತಿಹಾಸ 3X5.33=15.99 | 15.99X2=31.98 | 32 | |
| | ಕನ್ನಡ- ಸಮಾಜಶಾಸ್ತ್ರ-ರಾಜ್ಯಶಾಸ್ತ್ರ-15 | | ಅರ್ಥಶಾಸ್ತ್ರ 3X5.33=15.99 | 15.99X2=31.98 | 32 | |
| | ಇತಿಹಾಸ-ಅರ್ಥಶಾಸ್ತ್ರ-ರಾಜ್ಯಶಾಸ್ತ್ರ-15 | | ಕನ್ನಡ 2X5.33=10.66 | 10.66X2=21.32 | 22 | |
| | ಭೂಗೋಳಶಾಸ್ತ್ರ-0 | | ರಾಜ್ಯಶಾಸ್ತ್ರ 3X5.33=15.99 | 15.99X2=31.98 | 32 | |
| ಬಿ.ಎಸ್ಸಿ. 60 | ಭೌತಶಾಸ್ತ್ರ-ರಸಾಯನಶಾಸ್ತ್ರ-ಗಣಿತಶಾಸ್ತ್ರ-20 | 3 ವಿಷಯವಾರು ಸಮೂಹಗಳಲ್ಲಿ ಪುನರಾವರ್ತಿತವಾಗಿರುವ ವಿಷಯಗಳು ಸೇರಿದಂತೆ ಒಟ್ಟು 9 ವಿಷಯಗಳು ಇರುತ್ತವೆ. ಆದ್ದರಿಂದ ಒಟ್ಟು ಪ್ರವೇಶ ಮಿತಿಯನ್ನು 15 ರಿಂದ ಭಾಗಿಸುವುದು. **60/9=6.66** | ಭೌತಶಾಸ್ತ್ರ ವಿಷಯವು 2 ವಿಷಯವಾರು ಸಮೂಹಗಳಲ್ಲಿ ಪುನರಾವರ್ತಿತವಾಗಿದೆ. ಕಾರಣ. 2X6.66=13.32 | 13.32X2=36.64 | 36 | **156** ಹೀಗೆ ಪ್ರತಿ ವಿದ್ಯಾರ್ಥಿಯು ಎರಡು ವಿಷಯಗಳಿಗೆ ಪ್ರವೇಶ ಪಡೆದಂತಹ ಸಂದರ್ಭದಲ್ಲಿ 156 ವಿದ್ಯಾರ್ಥಿಗಳ ಸಂಖ್ಯೆಯನ್ನು ತೋರಿಸುತ್ತದೆ. ಆದರೆ ವಾಸ್ತವವಾಗಿ ಇಲ್ಲಿ 78 ವಿದ್ಯಾರ್ಥಿಗಳು ಮಾತ್ರ ಪ್ರವೇಶ ಪಡೆದುಕೊಂಡಿರುತ್ತಾರೆ ಎಂಬುದನ್ನು ಗಮನಿಸತಕ್ಕದ್ದು. |
| | ರಸಾಯನಶಾಸ್ತ್ರ-ಸಸ್ಯಶಾಸ್ತ್ರ-ಪ್ರಾಣಿಶಾಸ್ತ್ರ-20 | | ರಸಾಯನಶಾಸ್ತ್ರ 2X6.66=13.32 | 13.32X2=36.64 | 36 | |
| | ಭೌತಶಾಸ್ತ್ರ-ಗಣಿತಶಾಸ್ತ್ರ-ಗಣಕ ವಿಜ್ಞಾನ-20 | | ಗಣಿತಶಾಸ್ತ್ರ 2X6.66=13.32 | 13.32X2=36.64 | 36 | |

| | | | | | | |
|---|---|---|---|---|---|---|
| | ಇಲೆಕ್ಟ್ರಾನಿಕ್ಸ್-0 | | ಸಸ್ಯಶಾಸ್ತ್ರ<br>1X6.66=6.66 | 6.66X2=13.32 | 13+3 (ಕನಿಷ್ಠ ಪ್ರವೇಶ ಮಿತಿಗಾಗಿ)=16 | |
| | | | ಪ್ರಾಣಿಶಾಸ್ತ್ರ<br>1X6.66=6.66 | 6.66X2=13.32 | 13+3 (ಕನಿಷ್ಠ ಪ್ರವೇಶ ಮಿತಿಗಾಗಿ)=16 | |
| | | | ಗಣಕ ವಿಜ್ಞಾನ<br>1X6.66=6.66 | 6.66X2=13.32 | 13+3 (ಕನಿಷ್ಠ ಪ್ರವೇಶ ಮಿತಿಗಾಗಿ)=16 | |
| | | | ಇಲೆಕ್ಟ್ರಾನಿಕ್ಸ್ ವಿಷಯಕ್ಕೆ ಹಿಂದಿನ ವರ್ಷದಲ್ಲಿ ಯಾವುದೇ ಪ್ರವೇಶ ಮಿತಿ ನಿಗದಿಗೊಳಿಸದೇ ಇದ್ದುದ್ದರಿಂದ ಪ್ರಸಕ್ತವರ್ಷ ಯಾವುದೇ ಪ್ರವೇಶ ಮಿತಿ ನೀಡಲಾಗುವುದಿಲ್ಲ. | | | |

ನಿರ್ದೇಶಕರು

ಕಾಲೇಜು ಅಭಿವೃದ್ಧಿ ಮಂಡಳಿ